ಸಹೆ ಚೆನ್ನಾಗಿ ಉತ್ತರ ಕೊಟ್ಟರು, ಅವರಿಗೂ ಕನ್‌ವಿನ್ಸ್ ಆಯಿತಂ. ಪ್ರತಿಯೊಂದಕ್ಕೂ ಕೂಡಾ ಸೀನಿದ್ದು, ಕೆಮ್ಮಿದ್ದು ಎಂದು ನಮ್ಮ ಹಳ್ಳಿಯ ಕಡೆ ಹೇಳುತ್ತಾರೆ—ಆ ರೀತಿ ಸಣ್ಣಪುಟ್ಟ ವಿಚಾರಗಳಿಗೂ ಸಹಿತ ತಂದೂ ತಂದೂ ಅಡ್‌ಜರ್ನ್‌ಮೆಂಟ್ ಮೋಷನ್ ಕೊಡುವುದಕ್ಕೆ ಹೋಗಬೇಡಿ, ಅಡ್‌ಜರ್ನ್‌ಮೆಂಟ್ ಮೋಷನ್ ಬ್ರಹ್ಮಾಸ್ತ್ರ ಇದ್ದಹಾಗೆ, ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ ಮಾಡುವುದು ಬೇಡ. ಈ ಬ್ರಹ್ಮಾಸ್ತ್ರವನ್ನು ಯಾವಾಗ ಪ್ರಯೋಗ ಮಾಡಬೇಕು ಆಗ ಮಾಡಬೇಕು. ಗುಬ್ಬಿ ಹೊಡೆಯುವುದಕ್ಕೆ ಬ್ರಹ್ಮಾಸ್ತ್ರ ಪ್ರಯೋಗ ಮಾಡಬಾರದು ಇಂಥಾದ್ದನ್ನು ಬೇಕಾದರೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ ತೆಗೆದುಕೊಂಡು ಬನ್ನಿ, ಒಂದು ಹತ್ತು ನೋಟೀಸ್ ತನ್ನಿ, ನಾನಂ ಅವಕಾಶ ಮಾಡಿಕೊಡುತ್ತೇನೆ. ಆದರೆ ಸಣ್ಣಪುಟ್ಟದ್ದಕ್ಕೆಲ್ಲಾ ಅಡ್‌ಜರ್ನ್‌ಮೆಂಟ್ ಮೋಷನ್ ತೆಗೆದು ಕೊಂಡು ಬರಬೇಡಿ. ಸಿಪಿಐ. ಇರಲಿ ಸಿಪಿಎಂ. ಇರಲಿ, ಯಾವುದೇ ಪಕ್ಷ ಇರಲಿ, ಎಲ್ಲರಿಗೂ ನಾನಂ ಹೇಳುವುದು ಇಷ್ಟೇ,

ಶ್ರೀ ಎಂ. ಎಸ್ ಕೃಷ್ಣನ್.—ಇದು ಸಣ್ಣಪುಟ್ಟ ವಿಷಯ ಎಂದಂ ಹೇಳಿದಿರಿ. ಅಲ್ಲಿ ದೊಡ್ಡ ರೀತಿಯ ಅನಾಹುತ ನಡೆದಿದೆ, ಐದುನೂರು ಜನರನ್ನು ಹೊಡೆದಿದ್ದಾರೆ. ಗುಡಿಸಲುಗಳನ್ನು ಸುಟ್ಟಿ ಹಾಕಿದ್ದಾರೆ. ಪರಿಶಿಷ್ಟ ಜಾತಿಯವರ ಮೇಲೆ ಪಲ್ಲೆ ಮಾಡಿದ್ದಾರೆ ದಬ್ಬಾಳಿಕೆ ನಡೆದಿದೆ, ಇದನ್ನು ಸಣ್ಣ ಪುಟ್ಟ ವಿಷಯ ಎಂದು ಹೇಳುತ್ತಿದ್ದೀರಲ್ಲ, ನಾವೂ ಕೂಡಾ ಯೋಚನೆ ಮಾಡುತ್ತೇವೆ. ಯಾವುದನ್ನು ಅಡ್‌ಜರ್ನ್‌ಮೆಂಟ್ ಮೋಷನ್ ರೂಪದಲ್ಲಿ ಕೊಡಬೇಕು, ಕೊಡಬಾರದು ಎಂಬುದು ನಮಗೂ ಗೊತ್ತಿದೆ. ತಾವು ಈ ರೀತಿ ಹೇಳಿದರೆ ಚೆನ್ನಾಗಿರುವುದಿಲ್ಲ.

ಅಧ್ಯಕ್ಷರು.—ಆಯಿತು. ತಾವು ಕುಳಿತುಕೊಳ್ಳಿ, ಈಗ ನಿಯಮ ೩೩ಳಿರ ಕೆಳಗೆ ಪ್ರಸ್ತಾಪಿಸ ಲ್ಪಡುವ ವಿಷಯಗಳು,

## ನಿಯಮ ೩೩ಳಿರ ಮೇರೆಗೆ

## ನಾಡ ಕಚೇರಿಯನ್ನು ಪ್ರಾರಂಭಿಸುವ ಬಗ್ಗೆ

ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಅಧ್ಯಕ್ಷರೇ, ಕರ್ನಾಟಕ ರಾಜ್ಯ ಸರಕಾರದವರು ೧೯೮೮–೮೯ನೇ ಸಾಲಿನಲ್ಲಿ ಸಂಮಾರು ೩೧೮ ನಾಡ ಕಚೇರಿಯನ್ನು ಹೋಬಳಿ ಮಟ್ಟದಲ್ಲಿ ಪ್ರಾರಂಭಿಸುವು ದಾಗಿ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದು ಸರಿಯಷ್ಟೇ. ಹಾಗಿದ್ದಲ್ಲಿ ತರೀಕೆರೆ ತಾಲ್ಲೂಕು ಜನರ ಬೇಡಿಕೆ ಮತ್ತು ಅತ್ಯವಶ್ಯಕವಾಗಿ ಆಗಬೇಕಾಗಿರುವ ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ಹೋಬಳಿಯಲ್ಲಿ ನಾಡಕಚೇರಿಯನ್ನು ಮತ್ತು ಶಿವನಿ ಹೋಬಳಿಯಲ್ಲೂ ಕೂಡ ನಾಡ ಕಚೇರಿಯನ್ನು ಪ್ರಾರಂಭಿಸುವಿರಾ, ಯಾವಾಗ ಪ್ರಾರಂಭಿಸುವಿರಿ ? ನನ್ನ ತಾಲ್ಲೂಕಿನಲ್ಲಿ ಈ ಎರಡು ನಾಡಕಚೇರಿಯನ್ನು ಈ ವರ್ಷವೇ ಪ್ರಾರಂಭಿಸಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—ಮಾನ್ಯ ಅಧ್ಯಕ್ಷರೇ, ರಾಜ್ಯ ಸರಕಾರವು ರಾಜ್ಯದ ಎಲ್ಲಾ ಹೋಬಳಿಗಳಲ್ಲೂ (ಕಸಬಾ ಹೋಬಳಿ ಹೊರತು) ಹಂತಹಂತವಾಗಿ ನಾಡಕಚೇರಿಗಳನ್ನು ಪ್ರಾರಂಭಿಸಲು ತೀರ್ಮಾನವನ್ನು ತೆಗೆದುಕೊಂಡಿದೆ. ೧೯೮೮–೮೯ರ ಸಾಲಿನಲ್ಲಿ ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ನೋಡಿಕೊಂಡು ಮೂರು ಹೋಬಳಿಗಳಿಗಿಂತ (ಕಸಬಾ ಹೋಬಳಿ ಹೊರತು) ಹೆಚ್ಚಿಗೆ ಹೋಬಳಿಗಳಿರುವ ಎಲ್ಲಾ ತಾಲ್ಲೂಕುಗಳಲ್ಲೂ ಎರಡು ನಾಡ ಕಚೇರಿ ಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ತರೀಕೆರೆ ತಾಲ್ಲೂಕಿನಲ್ಲಿ ಕಸಬಾ ಹೋಬಳಿಯೂ ಸೇರಿದಂತೆ ಒಟ್ಟು ೬ ಹೋಬಳಿಗಳಿದ್ದು, ೧೯೮೮ರಲ್ಲಿ ಅಜ್ಜಂಪುರ ಹೋಬಳಿಯಲ್ಲಿ ನಾಡಕಚೇರಿಯನ್ನು ಪ್ರಾರಂಭಿಸಲಾಗಿದೆ. ಲಕ್ಕವಳ್ಳಿ ಮತ್ತು ಶಿವನಿ ಹೋಬಳಿಗಳಲ್ಲಿ ನಾಡ ಕಚೇರಿ ಪ್ರಾರಂಭಿಸುವ ಬಗ್ಗೆ ಸೂಕ್ತ ಸಮಯದಲ್ಲಿ ಸರಕಾರದ ನೀತಿಗೆ ಅನುಸಾರವಾಗಿ ಕ್ರಮ ತೆಗೆದುಕೊಳ್ಳಲಾಗುವುದಂ.